ಕರ್ನಾಟಕ ಸರ್ಕಾರ
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಪ.ಚು/56/2014

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ: 30.06.2014

ಗೆ,

**ಸಹಕಾರ ಸಂಘಗಳ ಉಪ ನಿಬಂಧಕರು**
----------------- ಜಿಲ್ಲೆ
-----------------

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ /ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ – ತತ್ಪರಿಣಾಮವಾಗಿ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಕುರಿತು.

**ಉಲ್ಲೇಖ:-** ಗೌರವ ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ 734/2014 ಮತ್ತು ಸಂಬಂಧಿತ ಇತರ ಮೇಲ್ಮನವಿಗಳಲ್ಲಿ ನೀಡಿರುವ ತೀರ್ಪು.

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಮತ್ತು ಪ್ರಕರಣ 39ಎಎ (ಸಂಕ್ಷಿಪ್ತವಾಗಿ 'ಅಧಿನಿಯಮ') ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26, 26–ಎ ಹಾಗೂ ಪ್ರಕರಣ 28ರ ಅವಕಾಶದಂತೆ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದನ್ವಯ ನಡೆಸತಕ್ಕದ್ದಾಗಿದ್ದು ಈ ಸಂಬಂಧ ಆಯೋಗವು ಹಲವಾರು ಸುತ್ತೋಲೆ /ಆದೇಶ / ಪತ್ರಗಳನ್ನು ಹೊರಡಿಸಿ ಮಾರ್ಗದರ್ಶನವನ್ನು ನೀಡಿರುತ್ತದೆ.

ಸಂವಿಧಾನ (ತೊಂಬತ್ತೇಳನೇ ತಿದ್ದುಪಡಿ) ಅಧಿನಿಯಮ 2011, ಈ ಅಧಿನಿಯಮಕ್ಕೆ ರಾಷ್ಟ್ರಾಧ್ಯಕ್ಷರು ದಿನಾಂಕ:12.01.2012 ರಂದು ಅನುಮೋದನೆ ನೀಡಿದ್ದು ಭಾರತ ರಾಜ್ಯಪತ್ರದಲ್ಲಿ (ಅಸಾಧಾರಣ) ದಿನಾಂಕ:13.01.2012ರಂದು ಅಧಿಕೃತವಾಗಿ ಪ್ರಕಟಗೊಂಡಿರುತ್ತದೆ. ಈ ತಿದ್ದುಪಡಿಯನ್ವಯ ಸಂವಿಧಾನ 'ಭಾಗ IX ಎ' ದ ನಂತರ ' ಭಾಗ IX ಬಿ' ಎಂದು ಸೇರ್ಪಡೆಗೊಂಡಿದ್ದು ಈ ಭಾಗದಲ್ಲಿನ ವಿಷಯವು ಸಹಕಾರ ಸಂಘಗಳಿಗೆ ಸಂಬಂಧಿಸಿದ್ದಾಗಿದೆ. ಈ ಸೇರ್ಪಡೆಯಲ್ಲಿ ಅನುಚ್ಛೇದ 243ZH ರಿಂದ ಅನುಚ್ಛೇದ 243ZT ವರೆಗೆ ಇರುತ್ತದೆ.

ಅನುಚ್ಛೇದ 243 ಝಡ್ ಜೆ (2) ಅನ್ವಯ ಸಹಕಾರ ಸಂಘಗಳ ಆಡಳಿತ ಸಮಿತಿಯ ಚುನಾಯಿತ ಸದಸ್ಯರ ಮತ್ತು ಅದರ ಪಧಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳು ಇರತಕ್ಕದ್ದು ಹಾಗೂ ಪದಾಧಿಕಾರಿಗಳ ಅವಧಿಯು ಆಡಳಿತ ಸಮಿತಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು (Co-terminus with the term of the Board) ಎಂದಿರುತ್ತದೆ.

ಸಂವಿಧಾನ (97ನೇ ತಿದ್ದುಪಡಿ) ಅಧಿನಿಯಮ -2011ರಂತೆ ಅನುಚ್ಛೇದ 243ZJ(2) ದ ಆಶಯಕ್ಕೆ ಅನುಗುಣವಾಗಿ ರಾಜ್ಯ ವಿಧಾನ ಮಂಡಲವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ ತಿದ್ದುಪಡಿಯನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 03) ಮೂಲಕ ತಂದಿದ್ದು ಇದಕ್ಕೆ 10.01.2013 ರಂದು ಕರ್ನಾಟಕ ರಾಜ್ಯಪಾಲರು ಸಮ್ಮತಿಯನ್ನು ನೀಡಿರುತ್ತಾರೆ. ಅದರಂತೆ ಅಧಿನಿಯಮ ಪ್ರಕರಣ 28ಎ(4)ಕ್ಕೆ ತರಲಾಗಿರುವ ತಿದ್ದುಪಡಿಯಂತೆ ಸಂಘದ ಆಡಳಿತ ಮಂಡಳಿ ಪದಾವಧಿ ಚುನಾವಣೆ ದಿನಾಂಕದಿಂದ 5 ವರ್ಷಗಳಾಗಿರತಕ್ಕದ್ದು ಹಾಗೂ ಪ್ರಕರಣ 29ಎಫ್(4)ಕ್ಕೆ ಮಾಡಲಾಗಿರುವ ತಿದ್ದುಪಡಿಯಂತೆ "ಸಹಕಾರಿ ಸಂಘದ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಲಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದು."

ಸಂವಿಧಾನ ಅನುಚ್ಛೇದ 243ZJ(2) ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 29ಎಫ್(4)ದ ಅವಕಾಶದಂತೆ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿದ್ದು ಅದು ಮಂಡಳಿ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದಾಗಿದೆ.

ಸಂವಿಧಾನದ 97ನೇ ತಿದ್ದುಪಡಿ / ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2013ರ ಕರ್ನಾಟಕ ಅಧಿನಿಯಮ ಸಂಖ್ಯೆ 03ರ ಮೂಲಕ ತಿದ್ದುಪಡಿ ತರುವ ಪೂರ್ವದಲ್ಲಿದ್ದ ಪ್ರಕರಣ 28ಎ(4) ರಂತೆ ಆಡಳಿತ ಸಮಿತಿಯ ಅವಧಿ 5 ಸಹಕಾರಿ ವರ್ಷಗಳಾಗಿತ್ತು ಮತ್ತು ಪ್ರಕರಣ 29ಎಫ್(5) ಪದಾಧಿಕಾರಿಗಳ ಅವಧಿಯು 2 ½ ವರ್ಷಗಳಾಗಿತ್ತು. ಆದರೆ ಸಂವಿಧಾನದ 97ನೇ ತಿದ್ದುಪಡಿಯಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿ ನಿಯಮಕ್ಕೆ ಮೇಲಿನ ಕಂಡಿಕೆಗಳಲ್ಲಿ ವಿವರಿಸಿದಂತೆ ಮಾಡಲಾದ ತಿದ್ದುಪಡಿಗಳು ಪೂರ್ವಾನ್ವಯವಾಗಿ ಜಾರಿಗೆ ಬರುವ ಅಂಶ ಗೌರವ ಉಚ್ಚನ್ಯಾಯಾಲಯವು ಕೆಳಕಂಡ ಪ್ರಕರಣದಲ್ಲಿ ನೀಡಿರುವ ಆದೇಶದಿಂದ ತಿಳಿದು ಬರುತ್ತದೆ.

ಗೌರವ ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ 734/2014 (ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು) ಮತ್ತು ಇದಕ್ಕೆ ಸಂಬಂಧಿಸಿದ ರಿಟ್ ಅಪೀಲುಗಳು ಕುರಿತಂತೆ ನ್ಯಾಯಾಲಯದ ಪೂರ್ಣ ಪೀಠವು ದಿನಾಂಕ:30.04.2014ರಂದು ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, ಅಧಿನಿಯಮಕ್ಕೆ ಪ್ರತಿಯೋಜಿಸಲಾದ (Substituted) ತಿದ್ದುಪಡಿಗಳು ಪೂರ್ವನ್ವಯವಾಗಿ ಜಾರಿಗೆ ಬರುತ್ತವೆ ಎಂದು ಆದೇಶ ನೀಡಿದೆ. ಈ ತೀರ್ಪನ್ನು ಸಹಕಾರ ಚುನಾವಣಾ ಆಯೋಗದ ವೆಬ್‌ಸೈಟ್‌ನ್ನು ನೋಡುವುದರ ಮೂಲಕ ತಿಳಿಯಬಹುದಾಗಿದೆ ಮತ್ತು ಅದರ ಮುದ್ರಿತ ಪ್ರತಿಯನ್ನು ಪಡೆದುಕೊಳ್ಳತಕ್ಕದ್ದಾಗಿದೆ. ಗೌರವ ಉಚ್ಚನ್ಯಾಯಾಲಯದ ಪೂರ್ಣ ಪೀಠವು ತೀರ್ಪಿನಲ್ಲಿ ಗಮನಿಸಿರುವ ಕೆಲವು ಅಂಶಗಳು /ಮುಖ್ಯಾಂಶದ ಆರಿಸಿದ ಭಾಗ ಈ ಕೆಳಕಂಡಂತೆ ಇರುತ್ತದೆ.

**ತೀರ್ಪಿನ ಕಂಡಿಕೆ 22**

..........................................................................................................................................

..........................................................................................................................................

It is well settled that the process of substitution consists of two steps, first, the old rule is made to cease to exist and new rule is brought in to existence in its place. Having regard to this principle, we find that all the substituted provisions by way of amendment Act No:3 of 2013, have retrospective operation. ..............................................................

..........................................................................................................................................

**ತೀರ್ಪಿನ ಕಂಡಿಕೆ –27**

i. Sub- Section (4) of section 28-A of the Act has retrospective operation

ii. The members of the existing boards shall continue to hold office till expiry of the period of five years from the date of their election and no administrator can be appointed till then.

The reference is answered accordingly.

ಸಂವಿಧಾನದ 97ನೇ ತಿದ್ದುಪಡಿ ಅಧಿನಿಯಮ –2011, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ, (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 03) ರ ಮೂಲಕ ಮಾಡಲಾದ ತಿದ್ದುಪಡಿ ಹಾಗೂ ಗೌರವ ಉಚ್ಚನ್ಯಾಯಾಲಯವು ಮೇಲೆ ನಮೂದಿಸಲಾದ ರಿಟ್ ಮೇಲ್ಮನವಿಯಲ್ಲಿ ನೀಡಲಾದ ದಿನಾಂಕ:30.04.2014ರ ತೀರ್ಪನ್ನು ಗಮನಿಸಿದಾಗ ಪ್ರಕರಣ 28ಎ(4) ರಂತೆ ಆಡಳಿತ ಮಂಡಳಿಯ ಪದಾವಧಿ ಚುನಾವಣೆ ದಿನಾಂಕದಿಂದ 5 ವರ್ಷಗಳಾಗಿದ್ದು ಪದಾಧಿಕಾರಿಗಳ ಅವಧಿಯು ಮಂಡಳಿಯ ಅವಧಿ ಜೊತೆಗೆ ಅಂತ್ಯಗೊಳ್ಳುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ /ನಿಯಮಗಳ ಅವಕಾಶಗಳಂತೆ ನಿಮ್ಮ ವ್ಯಾಪ್ತಿಯ ಕ್ಷೇತ್ರಾಧಿಕಾರಿಗಳು /ಸಂಬಂಧಿಸಿದ ಸಂಘಗಳಿಗೆ ಈ ಸಂಬಂಧ ಸೂಕ್ತ ತಿಳುವಳಿಕೆ ನೀಡುವಂತೆ ಮತ್ತು ಅದರಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ಹೆಚ್. ಮಂಜಪ್ಪ)
ಕಾರ್ಯದರ್ಶಿ

**ಪ್ರತಿಗಳು:**

1) ಎಲ್ಲಾ ಪ್ರಾಂತ್ಯಗಳ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಉಪ ವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು
3) ಕಛೇರಿ ಪ್ರತಿ /ಶಾಖಾ ಪ್ರತಿಗಳು